ಸಂಜೆ ವಾಣಿ

ಚಿತ್ರ ವಾಣಿ

# ಕಲ್ಕಿ ಕನ್ನಡ

ಕನ್ನಡ ರಾಜ್ಯೋತ್ಸವಕ್ಕೆ ಮತ್ತೊಂದು ಮನರಂಜನಾ ವಾಹಿನಿ ಕಲ್ಕಿ ಕನ್ನಡ ಸೇರ್ಪಡೆಯಾಗಿದೆ.

ಬದಲಾಗುತ್ತಿರುವ ಜನರ ಅಭಿರುಚಿ, ಕಲೆ, ಸಂಸ್ಕೃತಿ ಹಾಗು ಕನ್ನಡಿಗರ ಆಶೋತ್ತರಗಳನ್ನು ಗಮನದಲ್ಲಿಟ್ಟುಕೊಂಡು ವೈಟ್ ಹಾರ್ಸ್ ನೆಟ್‌ವರ್ಕ್ ಸರ್ವೀಸಸ್ ಸಂಸ್ಥೆಯ ಹೆಮ್ಮೆಯ ಕೊಡುಗೆ 'ಕಲ್ಕಿ ಕನ್ನಡ' ಮಾಧ್ಯಮ ಎಂದ ತಕ್ಷಣ ಎಲ್ಲರೂ ಯೋಚಿಸೋದು ಹೊಸತನ...ಹೊಸ ಯೋಚನೆ ಹಾಗೂ ವಿಭಿನ್ನ ಮನರಂಜನೆ. ಇಂತಹ ಒಂದು ಮನರಂಜನೆ ಕಾರ್ಯಕ್ರಮಗಳನ್ನು ವೀಕ್ಷಕರಿಗೆ ನೀಡುವುದು ಮುಖ್ಯ ಗುರಿಯಾಗಿದೆ ಎನ್ನುತ್ತಾರೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಪಿ ಕೈಲಾಸಂ.

ಈಗಾಗಲೆ ಕರ್ನಾಟಕದಲ್ಲಿ ಸಾಕಷ್ಟು ಮನರಂಜನೆ ವಾಹಿನಿಗಳ ಸ್ಪರ್ಧೆಗೆ ಸ್ಪರ್ಧಿಯಾಗಿ ಸಿದ್ಧವಾಗಿದೆ 'ಕಲ್ಕಿ ಕನ್ನಡ'. ಇಲ್ಲಿ ಹೊಸ ತಂತ್ರಜ್ಞಾನಗಳಿಂದ ಕೂಡಿದ ಉಪಕರಣಗಳು, ಕರ್ನಾಟಕದ ಕಿರುತೆರೆಯ ಇತಿಹಾಸದಲ್ಲಿ ಮೊದಲ ಬಾರಿಗೆ ಹೆಚ್.ಡಿ ಕ್ವಾಲಿಟಿವುಳ್ಳ ಮನರಂಜನೆಯ ಕಾರ್ಯಕ್ರಮಗಳನ್ನು ಕಿರುತೆರೆಯ ಮೇಲೆ ತರುತ್ತಿದೆ.

ಕಳೆದ 3--4 ತಿಂಗಳಿನಿಂದ ಸಂಪೂರ್ಣ ಸಿದ್ಧತೆಯೊಂದಿಗೆ ವೀಕ್ಷಕರ ನಾಡಿಮಿಡಿತವನ್ನು ಅರಿಯುವ ಸಲುವಾಗಿ ಎಲ್ಲ ಜಿಲ್ಲೆಗಳಲ್ಲಿ ಒಂದು ತಂಡವನ್ನು ರಚಿಸಿ ಜನರು ಇಷ್ಟಪಡುವ ಕಾರ್ಯಕ್ರಮಗಳನ್ನು ನೀಡುವ ಚಿಂತನೆ ಜೊತೆಗೆ ಸ್ಪರ್ಧಾತ್ಮಕ ವಾಹಿನಿಗಳಿಗಿಂತಲೂ ವಿಭಿನ್ನ ರಿತಿಯಲ್ಲಿ ನಮ್ಮ ಮನರಂಜನಾ ಕಾರ್ಯಕ್ರಮಗಳನ್ನು ಎಲ್ಲ ವರ್ಗದ ವೀಕ್ಷಕರಿಗೆ ನೀಡುವುದು ನಮ್ಮ ಮುಖ್ಯ ಉದ್ದೇಶವಾಗಿದೆ. ಕುಟುಂಬ ಸಮೇತರಾಗಿ ನೋಡುವಂತಹ ಅದ್ಧೂರಿತನದ ರಿಯಾಲಿಟಿ ಶೋಗಳು, ಮನಮಿಡಿಯುವ ಧಾರವಾಹಿಗಳು ಬರಲಿವೆ. ಅದ್ದೂರಿ ಸೆಟ್, ಭರ್ಜರಿ ರಿಯಾಲಿಟಿ ಶೋಗಳು, ಅದರಲ್ಲಿ ಸಿಂಗಿಂಗ್, ಡ್ಯಾನ್ಸಿಂಗ, ಕಾಮಿಡಿ, ಹೀಗೆ ನಾನಾ ತರಹದ ರಿಯಾಲಿಟಿ ಶೋಗಳ ಮೂಲಕ ಹೊಸ ಪ್ರತಿಭೆಗಳನ್ನು ಪರಿಚಯಿಸುವ ಮೊಟ್ಟಮೊದಲ ಬಾರಿಗೆ "ಹರಕೆ" ಎಂಬ ಕಾರ್ಯಕ್ರಮ ಇಲ್ಲಿ ನೀವು ಹೊತ್ತಿರುವ ಹರಕೆಗೆ ಕಲ್ಕಿ ಕನ್ನಡ ವಾಹಿನಿಯಿಂದ ನೀವು ಇಚ್ಛಿಸುವ ದೇವಾಲಯಗಳಿಗೆ ಹೋಗಿ ನಿಮ್ಮ ಹರಕೆಯನ್ನು ಈಡೆರಿಸಿಕೊಡುತ್ತದೆ ಹರಕೆ.

## ಕಲ್ಕಿ ಕನ್ನಡ ವೈಶಿಷ್ಟ್ಯಗಳು

### ಅನುಬಂಧ :

ವಯ್ಯಸ್ಸಿನ ಅಂತರವಿಲ್ಲದೆ ಸ್ನೇಹಿತರಾಘುವ ಅಪ್ಪ ಅಮ್ಮಂದಿರು, ಆ ಸ್ನೆಹ ಬಾಧವ್ಯದ ಕಥೆಯ ಜೊತೆಗೆ ಪ್ರೀತಿ ಒಲ್ಲದವನ ಬಾಳಲ್ಲಿ ಸೂರ್ಯಕಾಂತಿ ಅನಿವಾರ್ಯವಾಗಿ ಕಣ್ಮಣಿಯ ಮುಖವಾಡ ಹಾಕಿ ಪ್ರೀತಿಯನ್ನು ಪಡೆದುಕೊಳ್ಳುವ ಕಥೆ. ಇಂತಹ ಒಂದು ವಿಭಿನ್ನ ಕಥಾಹಂದರದದೊಂದಿಗೆ ಸೋಮವಾರ ದಿಂದ ಶುಕ್ರವಾರ ಸಂಜೆ 6 ಗಂಟೆಗೆ ನಿಮ್ಮ ಕಲ್ಕಿ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿದೆ.

### ಅಮ್ನೋರು :

ಎಲ್ಲರನ್ನು ಸಾಕಿ ಸಲಹೋಕೆ ತಾಯಿ ಇರ್ತಾಳೆ – ಜೀವನವನ್ನು ನಾಶ ಮಾಡೋಕೆ ಕೊಲ್ಲೋಕೆ ದುಷ್ಟ ಶಕ್ತಿಗಳು ಹೊಂಚು ಹಾಕುತ್ತವೆ. ದುಷ್ಟ ಶಕ್ತಿಯಿಂದ ದೊಡ್ಡಮನೆಯ ನಂದಾದೀಪ ಆರುತ್ತಾ?... ಇವಳು ಆಸರೆ ಆಗ್ತಾಳಾ? ಅಥವಾ ಬರ್ತಿರೋ ಬೈರಾಗಿ ಕಾಪಾಡ್ತಾನಾ? ಸಾಮಾಜಿಕ ಪುರಾಣ ಕಥಾ ಹಂದರದೊಂದಿಗೆ ನಿಮ್ಮ ಮನೆಗೆ ಬರ್ತಿದ್ದಾರೆ "ಅಮ್ನೋರು" ಸೋಮವಾರ ದಿಂದ ಶುಕ್ರವಾರ ಸಂಜೆ 6:30 ಕ್ಕೆ

### ಸೇವಂತಿ ಸೇವಂತಿ :

ಇಲ್ಲಿ ಪ್ರೀತಿ ಸಂಬಂಧಗಳ ಮೌಲ್ಯವಿದೆ, ಸ್ವಾರ್ಥವೂ ಇದೆ, ಸಾಧಿಸುವ ಛಲ ಸಮಾಜಕ್ಕೆ ಅರಿವಿನ ಸಂದೇಶವಿದೆ. ಪ್ರತಿಭಾವಂತರ ಯುವಕರ ತಂಡ ವೀಕ್ಷಕರಿಗಾಗಿ ವಿಭಿನ್ನ ಕಥೆಯೊಂದು ಹೆಣೆದಿದೆ, ತನ್ನ ಸುತ್ತ ಸುತ್ತುವ ಸಮಸ್ಯೆಗಳ ಸರಮಾಲೆಯಲ್ಲಿ ಮಿಂದೇಳುವ ನಾಯಕಿ. ಸಮಸ್ಯೆಗಳು ಇಲ್ಲದಿದ್ರೂ ಅವುಗಳನ್ನು ಸೃಷ್ಟಿಸಿಕೊಳ್ಳುವ ನಾಯಕ. ಹೀಗೆ ಇವರಿಬ್ಬರ ಭೇಟಿಯಾದ್ರೆ ಹೇಗಿರುತ್ತೆ. ಪ್ರತಿ ಸೋಮವಾರ ದಿಂದ ಶುಕ್ರವಾರ ರಾತ್ರಿ 7 ಗಂಟೆಗೆ ಪ್ರಸಾರವಾಗುತ್ತಿದೆ ನಿಮ್ಮ ಕಲ್ಕಿ ಕನ್ನಡ ವಾಹಿನಿಯಲ್ಲಿ.

### ಲಕ್ ಇದ್ರೆ ಲಕ್ಷ್ಮಿ

ಕಲಾವಿದ ಜಹಾಂಗೀರ್ ನಿರೂಪಣೆಯಲ್ಲಿ ಮೂಡಿ ಬರುತ್ತಿರುವ ಕಲ್ಕಿ ಎಕ್ಸ್‌ಪ್ರೆಸ್ ಕರ್ಯಕ್ರಮ ರಾಜ್ಯದ 30 ಜಿಲ್ಲೆಗಳಲ್ಲಿ ಸಂಚರಿಸಲಿದ್ದು, ಸ್ಥಳೀಯರನ್ನು ರಂಜಿಸಲಿದೆ. ಸ್ಥಳೀಯ ಪ್ರತಿಭೆಗಳಿಗೆ ವೇದಿಕೆಯಾಗಿದೆ. ಈ ಕಾರ್ಯಕ್ರಮ ಪ್ರತಿ ಶನಿವಾರ ಮತ್ತು ಭಾನುವಾರ ರಾತ್ರಿ 8 ಗಂಟೆಗೆ ಪ್ರಸಾರವಾಗಲಿದೆ.

### ಪದ್ದೂಸ್ ಕಿಚನ್

ಪದ್ಮಜಾರಾವ್ ನಿರೂಪಣೆಯಲ್ಲಿ ಮೂಡಿಬರಲಿರುವ ಪದ್ದೂಸ್ ಕಿಚನ್ ಅಡುಗೆ ಕಾರ್ಯಕ್ರಮ ಸರಳ ಹಾಗು ರುಚಿಕರವಾದ ಅಡುಗೆಯನ್ನು ಮಧ್ಯಾಹ್ನ ಮಾಡಿ ಬಡಿಸಲಿದ್ದಾರೆ. ಹಿರಿಯ ಪೋಷಕ ನಟ ಶ್ರೀನಿವಾಸಮೂರ್ತಿ ಅಡುಗೆ ಭಟ್ಟರಾಗಿ ಹೊಸ ಅವತಾರದಲ್ಲಿ ಕಾಣಿಸಿಕೊಳ್ಳುತ್ತಿರುವುದು ಈ ಕಾರ್ಯಕ್ರಮದ ವಿಶೇಷ. ಈ ಕಾರ್ಯಕ್ರಮ ಪ್ರತಿ ಸೋಮವಾರ ದಿಂದ ಶುಕ್ರವಾರ ವರೆಗೆ ಮಧ್ಯಾಹ್ನ 12.30 ಕ್ಕೆ ಮೂಡಿಬರಲಿದೆ.

### ಟಿ 20 ಲೈವ್

ನಿರೂಪಕ ಮುರಳಿ ಸಾರಥ್ಯದಲ್ಲಿ ಮೂಡಿಬರಲಿರುವ ಈ ನೇರ ಪ್ರಸಾರ ಕಾರ್ಯಕ್ರಮ ಪ್ರತಿ ಸೋಮವಾರ ದಿಂದ ಶುಕ್ರವಾರ ಸಂಜೆ 5 ಗಂಟೆಗೆ ಪ್ರಸಾರವಾಗಲಿದೆ. ಕಿರುತೆರೆ ಮತ್ತು ಹಿರಿತೆರೆಯ ಖ್ಯಾತ ಕಲಾವಿದರೊಂದಿಗೆ ಮುರಳಿ ಹರಟೆ ಹೊಡೆಯಲಿದ್ದಾರೆ. ಸ್ವಲ್ಪ ಮಾಹಿತಿ ಸಿಕ್ಕಾಪಟ್ಟೆ ತಲೆ ಹರಟೆ ಹಾಗು ಮನರಂಜನೆ ಈ ಕಾರ್ಯಕ್ರಮದಲ್ಲಿ ಇರಲಿದೆ. ವೀಕ್ಷಕರು ನೇರವಾಗಿ ಫೋನ್ ಕರೆ ಮಾಡಿ ನಿರೂಪಕರು ಹಾಗು ಅತಿಥಿಗಳೊಂದಿಗೆ ಮಾತನಾಡಬಹುದಾಗಿದೆ.

### ವಿಶ್ವರೂಪ

ಪ್ರತಿದಿನ ಬೆಳಗ್ಗೆ 8 ರಿಂದ 9 30 ಕ್ಕೆ ಸವಿತ್ರು ಶರ್ಮಾ ಗುರುಜಿ ಅವರಿಂದ ಜನರ ಸಮಸ್ಯೆಗಳಿಗೆ ಪರಿಹಾರೋಪಾಯ ನೀಡಲಿದ್ದಾರೆ. ನೇರ ಪ್ರಸಾರ ಕಾರ್ಯಕ್ರಮ ಇದಾಗಿದ್ದು, ವಿಕ್ಷಕರು ಫೋನ್ ಕರೆ ಮಾಡಿ ಶರ್ಮಾ ಗುರುಜಿ ಅವರೊಂದಿಗೆ ಮಾತನಾಡಿ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ.

### ನಮಸ್ತೆ ಕರುನಾಡು :

ಮಂಕುತಿಮ್ಮನ ಕಗ್ಗ ಕನ್ನಡಿಗರಿಗೆ ಅಚ್ಚು ಮೆಚ್ಚು. ಜೀವನದಲ್ಲಿ ತೃಪ್ತಿ, ನೆಮ್ಮದಿ, ಅಸಮಾಧಾನ ಇರುವ ಜೀವಗಳಿಗೆ ಮಂಕುತಿಮ್ಮನ ಕಗ್ಗಗಳ ಸ್ಪೂರ್ತಿಯೊಂದಿಗೆ ಅದರ ವಿಶ್ಲೇಷಣೆ ಹಾಗೂ ಜನಪ್ರೀಯ ಗಾಯಕಿ ಅರ್ಚನಾ ಉಡುಪ ದನಿಯಾಗಲಿದ್ದಾರೆ. ಪ್ರತಿ ದಿನ ಬೆಳಗ್ಗೆ 7 ಗಂಟೆಗೆ ನಿಮ್ಮ ಕಲ್ಕಿ ಕನ್ನಡ ವಾಹಿನಿಯಲ್ಲಿ ಮಾತ್ರ.

### ಅಭಿಶೇಕ:

ಕರ್ನಾಟಕ ಹಾಗೂ ದೇಶದ ಜನಪ್ರೀಯ ದೇವಸ್ಥಾನಗಳ ದರ್ಶನದೊಂದಿಗೆ 365 ದಿನ ಅಭಿಶೇಕದ ದರ್ಶನವನ್ನು ಪಡೆಯುವ ಸುವರ್ಣಾವಕಾಶ. ಪ್ರತಿದಿನ ಬೆಳಗ್ಗೆ 6:30 ಪ್ರಸಾರವಾಗಲಿದೆ.